ಮೈಸೂರು ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ

2656 (ಸಂ.೨೫೫) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ಮೈಸೂರು ತಾಲ್ಲೂಕಿನಲ್ಲಿ ಕಾರ್ಯನಿರತವಾಗಿರುವ ಗಣಿಗಳು ಎಷ್ಟು? ಅದರಲ್ಲಿ ಅಕ್ರಮವಾಗಿ ಗಣಿಗಾರಿಕೆಯಲ್ಲಿ ತೊಡಗಿರುವುದು ಎಷ್ಟು; ಇಂತಹ ಗಣಿಗಳ ವಿರುದ್ಧ ಏನು ಕ್ರಮ ತೆಗೆದುಕೊಳ್ಳಲಾಗಿದೆ.

ಆ. ಮೈಸೂರು ತಾಲ್ಲೂಕಿನಲ್ಲಿ ಯಾವ ಖನಿಜಗಳು ದೊರೆಯುತ್ತಿವೆ. ಇದರಿಂದ ಸರ್ಕಾರಕ್ಕೆ ಬರುವ ವಾರ್ಷಿಕ ಆದಾಯವೆಷ್ಟು?

ಇ. ಗಣಿ ಮತ್ತು ಭೂ ವಿಜ್ಞಾನ ನಿಯಮಾವಳಿಯ ಪ್ರಕಾರ ಈ ಗಣಿಗಳಲ್ಲಿ ಅಳವಡಿಸಿಕೊಳ್ಳಬೇಕಾದ ಸುರಕ್ಷತಾ ಕ್ರಮವನ್ನು ಕಟ್ಟುನಿಟ್ಟಾಗಿ ಜಾರಿ ಗೊಳಿಸಲಾಗಿದೆಯೆ;

ಈ. ಪರಿಸರಕ್ಕೆ ಹಾನಿಯಾಗದ ರೀತಿಯಲ್ಲಿ ಈ ಗಣಿಗಳು ಕಾರ್ಯ ನಿರ್ವಹಿಸಲು ಏನು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ;

ಉ. ಸುರಕ್ಷತಾ ಕ್ರಮ ಉಲ್ಲಂಘಿಸಿದ ಪ್ರಕರಣಗಳು ಎಷ್ಟು; ಎಷ್ಟನ್ನು ನೊಂದಾಯಿಸಲಾಗಿದೆ. ಎಷ್ಟು ಪ್ರಕರಣಗಳಲ್ಲಿ ದಂಡ ವಿಧಿಸಲಾಗಿದೆ. ದಂಡ ರೂಪದಲ್ಲಿ ಸ್ವೀಕರಿಸಲಾದ ರಾಜಸ್ವ ಎಷ್ಟು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :—

ಅ) ಮೈಸೂರು ತಾಲ್ಲೂಕಿನಲ್ಲಿ ೧೬ ಕಲ್ಲು ಗಣಿ ಗುತ್ತಿಗೆಗಳು ಹಾಗೂ ೫ ಗಣಿ ಗುತ್ತಿಗೆಗಳು ಜಾರಿಯಲ್ಲಿವೆ. ಇದಲ್ಲದೆ ೧೮ ಪ್ರದೇಶಗಳಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಗಣಿಗಾರಿಕೆಗಳನ್ನು ಪತ್ತೆ ಹಚ್ಚಲಾಗಿದೆ. ಅವುಗಳಲ್ಲಿ ೬ ಪ್ರದೇಶಗಳಿಗೆ ಕಲ್ಲುಗಣಿ ಗುತ್ತಿಗೆಗಳನ್ನು ಮಂಜೂರು ಮಾಡಿ ಸಕ್ರಮಗೊಳಿಸಲಾಗಿದೆ. ಎರಡು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಕಟ್ಟೆ ದಾವಿಲು ಮಾಡಿದೆ.

ಆ) ಮೈಸೂರು ತಾಲ್ಲೂಕಿನಲ್ಲಿ ಕಟ್ಟಡ ಕೆಲಸಕ್ಕೆ ಉಪಯೋಗವಾಗುವ ಗ್ರಾನೈಟ್ ಸುಣ್ಣ ತಯಾರಿಸಲು ಉಪಯೋಗವಾಗುವ ಲೈಮ್‌ಕಂಕರ್ ವಿಗ್ರಹಗಳು ಹಾಗೂ ಗೊಂಬೆಗಳನ್ನು ತಯಾರಿಸಲು ಉಪಯೋಗಿಸಲಾಗುವ ಬಳಪದ ಕಲ್ಲು ಮುಂತಾದ ಉಪಖನಿಜಗಳು, ಮ್ಯಾಗ್ನಸೈಟ್ ಡುನೈಟ್ ಪಲ್ಸಟ್ ಮುಂತಾದ ಮುಖ್ಯ ಖನಿಜಗಳು ಲಭ್ಯವಿದೆ. ಈ ಖನಿಜಗಳಿಂದ ಸರ್ಕಾರಕ್ಕೆ ವಾರ್ಷಿಕ ರೂ. ೧,೦೯,೯೯೦.೦೦ ಆದಾಯ ಬರುತ್ತದೆ.

ಗಣಿಗಾರಿಕೆ ನಿಮಯಗಳ ಪ್ರಕಾರ ಯಾವುದೇ ಸಾರ್ವಜನಿಕ ಕಟ್ಟಡ ರಸ್ತೆ, ಕೆರೆ ಇತ್ಯಾದಿಗಳಿಂದ ಸ್ಫೋಟಕಗಳನ್ನು ಬಳಸದೇ ೫೦ ಮೀಟರ್ ಬಿಟ್ಟು ಹಾಗೂ ಸ್ಫೋಟಕಗಳನ್ನು ಬಳಸಿದರೆ ೨೦೦ ಮೀಟರ್ ಬಿಟ್ಟು ಗಣಿಗಾರಿಕೆ ಮಾಡಬೇಕಾಗಿರುತ್ತದೆ.

ಸಣ್ಣ ಪ್ರಮಾಣದ ದೈಹಿಕವಾಗಿ ಕಲ್ಲು ತೆಗೆಯುವವರು ಈ ಸುರಕ್ಷಾ ನಿಮಯಗಳನ್ನು ಪಾಲಿಸುತ್ತಾರೆ.

ಯಂತ್ರಗಳನ್ನು ಉಪಯೋಗಿಸಿ ಗಣಿ ಮಾಡುವವರು ಸುರಕ್ಷಣಾ ನಿಯಮಗಂತೆ ಕೆಲಸ ನಿರ್ವಹಿಸುತ್ತಿದ್ದಾರೆ. ಅಂತಹವರು ಸುರಕ್ಷಣಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದಾರೆ.

ಈ) ಪರಿಸರಕ್ಕೆ ಹಾನಿಯಾಗದಂತೆ ಗಣಿಗಳಿಂದ ಅನುಪಯುಕ್ತವಾದ ಮಣ್ಣನ್ನು ವೈಜ್ಞಾನಿಕವಾಗಿ ದಿಬ್ಬಗಳಾಗಿ ಸಂಗ್ರಹಿಸಿ ಅವು ಮಳೆ ನೀರಿಗೆ ಕೊಚ್ಚಿ ಹೋಗದಂತೆ ಗಿಡಗಳನ್ನು ನೆಡಿಸಲಾಗಿದೆ. ಹಾಗೂ ಮಣ್ಣು ಕೊಚ್ಚಿ ಹೋಗದಂತೆ ಅಡ್ಡಗಟ್ಟುಗಳನ್ನು ನಿರ್ಮಿಸಲಾಗಿದೆ. ಸಾಗಾಣಿಕೆ ಸಮಯದಲ್ಲಿ ವಾಸಸ್ಥಳಗಳ ಮಧ್ಯೆ ಹಾದು ಹೋಗುವ ರಸ್ತೆಗಳಿಗೆ ದೂಳು ಏಳದಂತೆ ನೀರು ಎರಚಲಾಗುತ್ತದೆ. ಗಣಿಗಳಲ್ಲಿ ಅಪಘಾತಗಳನ್ನು ತಪ್ಪಿಸಲು ಸುರಕ್ಷತೆಯ ಬಗ್ಗೆ ಹೆಚ್ಚಿನ ಪ್ರಚಾರ ಕಾರ್ಯಕ್ರಮಗಳನ್ನು ಗುತ್ತಿಗೆದಾರರ ಸಹಯೋಗದೊಂದಿಗೆ ನಡೆಸಲಾಗುತ್ತದೆ. ಹಾಗೂ ಸಂರಕ್ಷಣಾ ವಿಧಾನಗಳನ್ನು ಅನುಸರಿಸಲು ಸೂಚಿಸಲಾಗುತ್ತದೆ.

ಉ) ಸುರಕ್ಷತಾ ಕ್ರಮವನ್ನು ಪಾಲಿಸದ ಗಣಿ ಗುತ್ತಿಗೆದಾರರಾದ ಶ್ರೀ ಮಹಮದ್ ಅಕ್ರಮ್‌ರವರಿಗೆ ನೋಟೀಸ್ ಜಾರಿ ಮಾಡಿ ತದನಂತರ ಗುತ್ತಿಗೆದಾರರು ಸೂಕ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲು ಕ್ರಮ ತೆಗೆದುಕೊಳ್ಳಲಾಗಿದೆ. ಮೈಸೂರು ತಾಲ್ಲೂಕಿನಲ್ಲಿನ ಗಣಿಗುತ್ತಿಗೆ ಪ್ರದೇಶದಲ್ಲಿ ಸುರಕ್ಷತಾ ಕ್ರಮಗಳನ್ನು ಬಹಳಷ್ಟು ಮಟ್ಟಿಗೆ ಪಾಲಿಸಲಾಗಿದೆ. ಅದಲ್ಲದೆ ಸುರಕ್ಷತಾ ಕಾಯಿದೆ ಉಲ್ಲಂಘಿಸಿದ ಏಳು ಪ್ರಕರಣಗಳಲ್ಲಿ ರೂ.೧೦,೦೦೦-ದಂಡ ವಿಧಿಸಿ ಸಂಗ್ರಹಿಸಲಾಗಿದೆ. ಹಾಗೂ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ. (ಉಲ್ಲಂಘನೆ ಮಾಡಿದವರ ಕಲ್ಲು ಗಣಿಗುತ್ತಿಗೆಯನ್ನು ರದ್ದುಪಡಿಸಲಾಗುತ್ತದೆ. ಇದರಂತೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿನ ಬಂಡಿಪಾಳ್ಯ, ಹೊಸಹುಂಡಿ ಉತ್ತನಹಳ್ಳಿ ಗ್ರಾಮಗಳಲ್ಲಿ ಈ ಹಿಂದೆ ಮಂಜೂರಾಗಿದ್ದ ಗುತ್ತಿಗೆ ಸಂಖ್ಯೆ ೩೯೮, ೪೯೨, ೫೦೩ ಮತ್ತು ೫೦೭ಗಳನ್ನು ಪರಿಸರ ಸಂರಕ್ಷಣೆ ದೃಷ್ಟಿಯಿಂದ ಹಾಗೂ ಚಾಮುಂಡಿ ಬೆಟ್ಟದ ಸಂರಕ್ಷಣೆ ದೃಷ್ಟಿಯಿಂದ ರದ್ದುಪಡಿಸಲಾಗಿದೆ. ಹಾಗೂ ಗಣಿಗಾರಿಕೆಯನ್ನು ಸ್ಥಗಿತಗೊಳಿಸಲಾಗಿದೆ.